ಶ್ರೀ ಎಂ.ಸಿ. ನಾಣಯ್ಯ:- ಇದರ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ ಈಗ ಮಂತ್ರಿಗಳಿಗೆ ಪತ್ರವನ್ನು ಬರೆದಿರತಕ್ಕದ್ದರ ಮೇಲೆ ಬಹುಶ: ಅವರು ಕ್ರಮ ಕೈಗೊಂಡಿರುತ್ತಾರೆ. ಡಿ.ಐ.ಜಿ.ಅವರನ್ನು ಸಂಪರ್ಕ ಮಾಡಿ ಇದರ ಬಗ್ಗೆ ಒಂದು ತನಿಖೆಯನ್ನು ಮುಂದುವರೆ ಸತಕ್ಕಂಥಾದ್ದು ಮತ್ತು ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಹಿಂದು ಮುಂದೆ ನೋಡುವುದಿಲ್ಲ.

ಊ) ದಕ್ಷಿಣ ಕನ್ನಡ ಜಿಲ್ಲೆಯ ಮಾರ್ತೇದಾರರ ಸಂಘದಿಂದ ಕೊಡಬೇಕಾದ ಹಣವನ್ನು ಮನ್ನ ಮಾಡುವುದು

ಶ್ರೀ ವಸಂತ್ ಏ. ಸಾಲಿಯಾನ:- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆ 12 ಸಾವಿರ ಮೂರ್ತೇದಾರರು ಇರತಕ್ಕಂಥ ಒಂದು ಜಿಲ್ಲೆ. 1992ನೇ ಇಸವಿಯಲ್ಲಿ ಆಗಿನ ಮಾನ್ಯ ಮಂತ್ರಿಗಳಾದ ಮಾನ್ಯ ಬಂಗಾರಪ್ಪನವರು ಸಹಕಾರ ಸಂಘಗಳ ಮುಖೇನ ಮೂರ್ತೇದಾರರು ಮಾರಾಟ ಮಾಡಬೇಕೆಂದು ಆಜ್ಞೆ ಮಾಡಿದ್ದರು. ಮುಖ್ಯ ಮಂತ್ರಿಗಳು ಆಜ್ಞೆ ಮಾಡಿ ಆದ ಮೇಲೆ ಈ ಸಹಕಾರ ಸಂಘಗಳ ರಚನೆ ಮಾಡಲಿಕ್ಕೆ ಸುಮಾರು 2 ವರ್ಷ ಹಿಡಿಯಿತು. ಆ ಸಂದರ್ಭದಲ್ಲಿ ಸರ್ಕಾರ ಒಂದು ರೂಪಾಯಿ ಫೀಯನ್ನು ಸಹಕಾರ ಸಂಘಗಳಿಗೆ ಮೂರ್ತೇದಾರರು ಕೊಡಬೇಕೆಂದು ಆದೇಶ ಮಾಡಿತು. ತರುವಾಯ 1994ನೇ ಇಸವಿಯಲ್ಲಿ ಆಗಿನ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪಮೊಯ್ಲಿ ಅವರು ಒಂದು ರೂಪಾಯಿ ಫೀಯನ್ನು ಮನ್ನಾ ಮಾಡಿದರು. ಮನ್ನಾ ಮಾಡಿದ ಬಳಿಕ ಮೂರ್ತೇದಾರರಿಂದ ಒಂದು ರೂಪಾಯಿ ಕೂಡ ಬರಲಿಲ್ಲ. ಹೀಗಾಗಿ ಇಲಾಖೆಯವರು ಮತ್ತು ಸರ್ಕಾರದವರು ನಲವತ್ತೊಂದು ಲಕ್ಷದ ತೊಂಭತ್ತೆರಡು ಸಾವಿರ ರೂಪಾಯಿ ಹಣವನ್ನು ಮೂರ್ತೇದಾರರ ಸಹಕಾರ ಸಂಘದ ಮೂಲಕ ಕೊಡಬೇಕೆನ್ನುವ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆ. ಸರ್ಕಾರ ದಯವಿಟ್ಟು ಇದನ್ನು ಪರಿಶೀಲಿಸಿ ಈ ಹಣವನ್ನು ಮೂರ್ತೇದಾರರ ಪರವಾಗಿ ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು:- ಈ ಒಂದು ವಿಚಾರ ಈ ಸದನದಲ್ಲಿ ಚರ್ಚೆಯಾಗಿದೆ. ಸರ್ಕಾರ ಒಪ್ಪಿ ಬಹುಶ: ಅದನ್ನು ಮನ್ನಾ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಮೂರ್ತೇದಾರರು ಯಾರೂ ಫೀಸನ್ನು ಕಟ್ಟಿಲಿಲ್ಲ. ಮತ್ತು ಸರ್ಕಾರ ಕೂಡ ವಸೂಲು ಮಾಡುವುದಕ್ಕೆ ಹೋಗಲಿಲ್ಲ. ಈ ಬಗ್ಗೆ ಅಧಿಕೃತವಾಗಿ ಆಜ್ಞೆ ಮಾಡಬೇಕೆಂದು ಕೇಳುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಋ) ಹಾಸನ ಜಿಲ್ಲಾಧಿಕಾರಿಗಳು Apmc ಚುನಾವಣೆ ಪ್ರಕಟಿಸಿರುವುದು.

ಶ್ರೀ ಬಿ. ಶಿವರಾಂ(ಗಂಡಸಿ):-ಮಾನ್ಯ ಅಧ್ಯಕ್ಷರೆ, ಈಗ ಹಾಸನದ ಜಿಲ್ಲಾಧಿಕಾರಿಗಳು ಎ.ಪಿ. ಎಂ.ಸಿ. ಚುನಾವಣೆ 17ನೇ ತಾರೀಖು ನಡೆಯುತ್ತದೆ ಎಂದು ವೇಳಾಪಟ್ಟಿಯನ್ನು ಪ್ರಕಟ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದ ಕಾರ್ಯಕ್ರಮಗಳ ಉದ್ಘಾಟನೆಯನ್ನು ಸಚಿವರು ಮಾಡಬಹುದೇ ಎನ್ನತಕ್ಕದ್ದು ಒಂದು ವಿಚಾರ.

ಎರಡನೆಯದು ಸದನ ನಡೆಯತಕ್ಕ ಕಾಲದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಆ ಕ್ಷೇತ್ರದಲ್ಲಿ ಸರ್ಕಾರಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದೆ?

ಮೂರನೆಯದು ಈಗಾಗಲೇ ಹೊರಡಿಸಿರತಕ್ಕ ಸುತ್ತೋಲೆ ಮತ್ತು ಈ ಸದನದಲ್ಲಿ ಸಾಕಷ್ಟು ಸಾರಿ ಚರ್ಚೆಯಾಗಿರುವ ಪ್ರಕಾರ ಸಂಬಂಧಪಟ್ಟ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಸಮಾರಂಭಗಳನ್ನು ನಡೆಸಬೇಕೆಂದು ಇದೆ. ಇಷ್ಟಾದರೂ ಕೂಡ ಸರ್ಕಾರಿ ಕಾರ್ಯಕ್ರಮಗಳ ಅಧ್ಯಕ್ಷತೆ ಮತ್ತು ಉದ್ಘಾಟನೆ ಕಾರ್ಯಕ್ರಮ ಬೇರೆಯವರ ಹೆಸರಿಗೆ ಹಾಕಿ ಶಾಸಕರ ಹೆಸರನ್ನು ತಾಲ್ಲೂಕು ಪಂಚಾಯಿತಿ ಸದಸ್ಯರ ಕೆಳಗೆ ಹಾಕತಕ್ಕ ವ್ಯವಸ್ಥೆ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಇವೋತ್ತು ಅನಿವಾರ್ಯವಾಗಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಶೂನ್ಯ ವೇಳೆಯಲ್ಲಿ ಅವಕಾಶ ಮಾಡಿಕೊಡಿ ಎಂದು ತಮ್ಮ ಅನುಮತಿಯನ್ನು ಪಡೆದು ಮಾತನಾಡುತ್ತಿದ್ದೇನೆ. ನಾಳೆ ಅಲ್ಲಿ ಆ ಕಾರ್ಯಕ್ರಮಗಳನ್ನು ಹಾಕತಕ್ಕಂಥದ್ದು ಇದೆ. ಚುನಾವಣಾ ವೇಳಾ ಪಟ್ಟಿ ಆಗಿದೆ, ಇಲ್ಲಿ ಸದನ ನಡೆಯುತ್ತಿದೆ ಮತ್ತು ನಾಳೆಯೂ ಕೂಡ ಸದನ ಇದೆ. ಇದರ ಜೊತೆಗೆ ಆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾಡುವುದಾದರೆ ಈ ಕ್ಷೇತ್ರದ ಶಾಸಕರು ಇರಬೇಕೋ ಬೇಡವೋ? ಹಾಸನದಲ್ಲಿ ಅದರಲ್ಲೂ ವಿಶೇಷವಾಗಿ ಹೊಳೇನರಸಿಪುರದಲ್ಲಿ ನಡೆದ ಘಟನೆ ಬಗ್ಗೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿ ಏನೇನಾಗಿದೆ ಎಂಬುದು ತಮಗೂ ಗೊತ್ತಿದೆ. ಸರ್ಕಾರಕ್ಕೂ ಕೂಡ ಗೊತ್ತಿದೆ. ಇಷ್ಟೆಲ್ಲಾ ಇದ್ದರೂ ಕೂಡ ಸರ್ಕಾರ ಪ್ರೊಬೋಕಾಲ್ ಮಾಡಿ ಯಾರ್ಯಾರು ಯಾವ್ಯಾವ ಸ್ಥಾನದಲ್ಲಿ ಇರಬೇಕು, ಯಾರ್ಯಾರನ್ನು ಪಟ್ಟಿಯಲ್ಲಿ (ಆಹ್ವಾನ ಪತ್ರಿಕೆಯಲ್ಲಿ) ಸೇರಿಸಬೇಕು ಎಂಬ ವಿಚಾರಗಳನ್ನು ಹೇಳಿದ್ದರೂ ಕೂಡ ಈ ರೀತಿಯಲ್ಲಿ ಶಾಸಕರನ್ನು ಬಿಟ್ಟು ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಒಂದು ಸರ್ಕಾರಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಏನು ಮುದ್ರಿಸಿದ್ದಾರೆಂದರೆ ರಂಗಾಪುರ ಗ್ರಾಮ ಪಂಚಾಯತಿ ಸದಸ್ಯರು ಮತ್ತು ಗ್ರಾಮಸ್ಥರು ಎಂದು ಹಾಕಿಸಿದ್ದಾರೆ. ಕಾರ್ಯಕ್ರಮಗಳು ಸರ್ಕಾರಿ ಪ್ರೌಢಶಾಲೆಗಳದ್ದು ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಉದ್ಘಾಟನಾ ಸಮಾರಂಭಗಳಾಗಿವೆ. ಈ ಕಾರ್ಯಕ್ರಮಗಳಲ್ಲಿ ಶಾಸಕರನ್ನು ಬಿಟ್ಟಿದ್ದಾರೆ. ಈ ರೀತಿಯಾದರೆ ಶಾಸಕರು ನೆಮ್ಮದಿಯಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಹೆಚ್.ಡಿ. ರೇವಣ್ಣ(ವಸತಿ ಸಚಿವರು):- ಮಾನ್ಯ ಅಧ್ಯಕ್ಷರೇ, ಸರ್ಕಾರೀ ಕಾರ್ಯಕ್ರಮಗಳಲ್ಲಿ ಯಾವತ್ತೂ ಶಾಸಕರನ್ನು ಬಿಟ್ಟು ಮಾಡಿಲ್ಲ. ಆಹ್ವಾನ ಪತ್ರಿಕೆಯಲ್ಲಿ ಯಾವತ್ತೂ ಸರ್ಕಾರ ತನ್ನ ಕಾರ್ಯಕ್ರಮಗಳಲ್ಲಿ ಆ ಕ್ಷೇತ್ರದ ಶಾಸಕರ ಹೆಸರನ್ನು ಮುದ್ರಿಸದೆ ಕಾರ್ಯಕ್ರಮವನ್ನು ಮಾಡಿಲ್ಲ. ಅಂಥದ್ದೇನಾದರೂ ಇದ್ದರೆ ಹೇಳಲಿ. ಆದರೆ ಯಾರೋ ಸಾರ್ವಜನಿಕರು ಮಾಡಿಕೊಳ್ಳುವ ಕಾರ್ಯಕ್ರಮದ ಪಟ್ಟಿಯಲ್ಲಿ ಶಾಸಕರ ಹೆಸರನ್ನು ಬಿಟ್ಟಿದ್ದರೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- 5 ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಕಳುಹಿಸಿಕೊಡುತ್ತೇನೆ. ಅದರಲ್ಲಿ ನನ್ನನ್ನು ಬಿಟ್ಟು ಮಾಡಿದ್ದಾರೆ.

ಅಧ್ಯಕ್ಷರು:- ನೀವು ಅವರ ಮಧ್ಯೆ ಬರಬೇಡಿ, ನುಚ್ಚುನೂರಾಗಿ ಬಿಡುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನು ಅವರನ್ನೂ ನೋಡಿದ್ದೇನೆ, ಇವರನ್ನೂ ನೋಡಿದ್ದೇನೆ, ನುಚ್ಚುನೂರಾಗುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು:- ನಾನು ನಿಮಗೆ ಹೇಳಿದ್ದು ಅರ್ಥವಾಗಲಿಲ್ಲ. ತಮಗೆ ಆಗೌರನ ಮಾಡಬೇಕೆಂದು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು:- ಸನ್ಯಾಸ್ಯ ಶಿವಪ್ಪನವರೇನೋ ಮಾತನಾಡಬೇಕಂತೆ, ಅವರು ಎದ್ದುನಿಂತಿದ್ದಾರೆ.

ಶ್ರೀ ಬಿ.ಬಿ. ಶಿವಪ್ಪ(ಸಕಲೇಶಪುರ):- ಮಾನ್ಯ ಅಧ್ಯಕ್ಷರೇ, ಶಿವರಾಮ್‌ರವರು ಏನು ಪ್ರಸ್ತಾಪ ಮಾಡಿದರೋ ಇದು ನಮ್ಮ ಜಿಲ್ಲೆಗೆ ಮಾತ್ರ ಸೀಮಿತವಾಗಿದೆಯೋ ಅಥವಾ ಎಲ್ಲಾ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇದೆಯೋ ನನಗೆ ಗೊತ್ತಿಲ್ಲ. ಆದರೆ ಇದು ಸತತವಾಗಿ ನಡೆಯುತ್ತಿದೆ. ಮಾನ್ಯ ಮಂತ್ರಿಗಳೇನೋ ತಮ್ಮ ಉತ್ತರದಲ್ಲಿ ಯಾರೋ ಗ್ರಾಮಸ್ಥರು ಮಾಡಿಕೊಂಡರೆ ಅದಕ್ಕೆ ನಮ್ಮ ಸಂಬಂಧವಿಲ್ಲ, ನಾವು ಜವಾಬ್ದಾರರಲ್ಲ ಎಂದು ಹೇಳಿಬಿಟ್ಟರು. ಆದರೆ ಪ್ರೊಟೋಕಾಲ್ ಇದೆ, ಕಾರ್ಯಕ್ರಮವನ್ನು ಹೇಗೆ ರೂಪಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಗೊತ್ತಿರುತ್ತದೆ. ಆಯಾಯ ಇಲಾಖೆಗಳಲ್ಲಿ ಇದು ಇದ್ದೇ ಇರುತ್ತದೆ. ಸಂಬಂಧಪಟ್ಟ ಶಾಸಕರು ಆಹ್ವಾನ ಪತ್ರಿಕೆಯಲ್ಲಿ ಎಲ್ಲಿ ಬರಬೇಕೆನ್ನುವ ಮಾಹಿತಿ ಇದೆ. ಆ ಮಾಹಿತಿ ಪ್ರಕಾರ ಅನುಸರಿಸಬೇಕು ಎನ್ನುವ ಅಂಶವನ್ನು ಸಂಬಂಧಪಟ್ಟ ಮಂತ್ರಿಗಳು ಗ್ರಾಮಸ್ಥರಿಗೆ ತಿಳಿವಳಿಕೆಯನ್ನು ಕೊಟ್ಟರೆ ಆ ಗ್ರಾಮಸ್ಥರು ತಿದ್ದಿಕೊಳ್ಳುತ್ತಾರೆ ಮತ್ತು ಆ ಪ್ರಕಾರ ಶಾಸಕರನ್ನು ಪಟ್ಟಿಯಲ್ಲಿ ಸೇರಿಸುತ್ತಾರೆ. ಇದಲ್ಲದೇ ಒಂದು ಸೂಕ್ತವಾದ ಸಲಹೆಯನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ಏನೆಂದರೆ ಜಿಲ್ಲಾ ಉಸ್ತುವಾರಿ ಮಂತ್ರಿಯೆಂದು ಆ ಜಿಲ್ಲೆಯ ಪ್ರಗತಿ ಮತ್ತು ಅಭಿವೃದ್ಧಿಯ ಕಥೆ ಹೆಚ್ಚು ಗಮನ ಕೊಡಲು ನೇಮಕ ಮಾಡುತ್ತೀರಿ. ಇದೇ ಉದ್ದೇಶದಿಂದ ನೀವು ಮಾಡುವುದಾದರೆ ಆಯಾಯ ಜಿಲ್ಲೆಯ ಮಂತ್ರಿಗಳನ್ನು ಆಯಾಯ ಜಿಲ್ಲೆಗಳಿಗೇ ಉಸ್ತುವಾರಿ ಸಚಿವರನ್ನಾಗಿ ಮಾಡದೇ ಬೇರೆ ಜಿಲ್ಲೆಯವರನ್ನು ಉಸ್ತುವಾರಿ ಸಚಿವರನ್ನಾಗಿ ಮಾಡಿದರೆ ಸ್ವಲ್ಪ ಮಟ್ಟಿಗೆ ಕೆಲಸಗಳು ಉತ್ತಮವಾಗುತ್ತವೆಯೇ ವಿನ ಅದೇ ಜಿಲ್ಲೆಯವರನ್ನು ಉಸ್ತುವಾರಿ ಸಚಿವರನ್ನಾಗಿ ಮಾಡಿದರೆ ಕೇವಲ ರಾಜಕೀಯ ಬಿಟ್ಟರೆ ಬೇರೆ ಕೆಲಸಗಳು ಆಗುವುದಿಲ್ಲ. ಇದನ್ನು ಅತ್ಯಂತ ಬೇಸರದಿಂದ ಹೇಳುತ್ತಿದ್ದೇನೆ. ಆದುದರಿಂದ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಜಿಲ್ಲೆಗೆ ಉಸ್ತುವಾರಿ ಸಚಿವರ ಅವಶ್ಯಕತೆ ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಬೇರೆ ಬೇರೆ ಜಿಲ್ಲೆಯವರನ್ನು ಉಸ್ತುವಾರಿ ಸಚಿವರನ್ನಾಗಿ ಮಾಡಬೇಕು. ಅದು ಬಿಟ್ಟು ಅದೇ ಜಿಲ್ಲೆಯವರನ್ನೇ ಉಸ್ತುವಾರಿ ಸಚಿವರನ್ನಾಗಿ ಮಾಡುವುದು ಒಳ್ಳೆಯದಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅಧ್ಯಕ್ಷರೇ, ಇದು ಎಲ್ಲಾ ಕ್ಷೇತ್ರಗಳಲ್ಲಿ ನಡೆಯುತ್ತಿದೆ. ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರನ್ನು ಹಾಕಿಲ್ಲವೆಂದು ಈ ಸದನದಲ್ಲಿ ಹೇಳುವ ಸನ್ನಿವೇಶ ಬರುತ್ತದಲ್ಲ ಅದಕ್ಕಿಂತ ಅಸಹ್ಯ ಮತ್ತೊಂದಿಲ್ಲ. ಇದರ ಬಗ್ಗೆ ಸರ್ಕಾರ

ಗಂಭೀರವಾಗಿ ಯೋಚನೆ ಮಾಡಬೇಕು. ಈ ರೀತಿಯ ನಡವಿಳಿಕೆಗಳ ಬಗ್ಗೆ ಅತ್ಯಂತ ಗಂಭೀರವಾಗಿ ಸರ್ಕಾರ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸರ್ಕಾರ ಸೂಕ್ತವಾದ ಆದೇಶವನ್ನು ಕೊಡಬೇಕು. ಅಥವಾ ತಮ್ಮ ಸರ್ಕಾರ ಬಂದಮೇಲೆ ಪ್ರೊಟೊಕಾಲ್‌ನಲ್ಲಿ ಬದಲಾವಣೆ ಮಾಡಿದ್ದರೆ ಅದನ್ನಾದರೂ ಈ ಸದನದಲ್ಲಿ ಸರ್ಕಾರ ಎಲ್ಲಾ ಸದಸ್ಯರಿಗೆ ತಿಳಸಬೇಕು.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ನನ್ನ ಜಿಲ್ಲೆಯಲ್ಲಿ ಮಾಡುವಂಥ ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಾಸಕರನ್ನು ಮತ್ತು ಶಾಸಕರ ಹೆಸರನ್ನು ಬಿಟ್ಟು ಮಾಡಿಲ್ಲ. ಶಾಸಕರ ಹೆಸರನ್ನು ಹಾಕಿಯೇ ಹಾಕುತ್ತೇವೆ. ಆದರೆ ಬೇರೆ ಯಾರೋ ಸಾರ್ವಜನಿಕರು ಮಾಡುವ ಕಾರ್ಯಕ್ರಮಗಳಲ್ಲಿ ಶಾಕರರ ಹೆಸರನ್ನು ಬಿಟ್ಟರೆ ಏನು ಮಾಡುವುದು?

ಅಧ್ಯಕ್ಷರು:- ಈ ಸನ್ನಿವೇಶಕ್ಕೆ ತಕ್ಕಂತೆ ನೀವು ಉತ್ತರ ಕೊಟ್ಟಿದ್ದೀರಿ. ಸಾರ್ವಜನಿಕರು ಕಾರ್ಯಕ್ರಮ ಮಾಡುತ್ತಾರೆಂದರೆ, ಮಂತ್ರಿಗಳ ಪರಿಚಯಸ್ಥರೋ ಅಥವಾ ಬೇರೆ ಯಾರೋ ಇರಬಹುದು, ಅಂಥ ಸಂದರ್ಭಗಳಲ್ಲಿ ಮಂತ್ರಿಗಳು ಅವರನ್ನು ಕರೆದು ಅವರಿಗೆ ಹಿತನುಡಿ ಹೇಳಬೇಕು, ಆ ರೀತಿ ಹೆಸರನ್ನು ಬಿಡಬಾರದು, ಏಕೆಂದರೆ ಅವರೂ ಕೂಡ ಆರಿಸಿ ಬಂದಂಥವರು, ಆದ್ದರಿಂದ ಆಹ್ವಾನ ಪತ್ರಿಕೆಯಲ್ಲಿ ಶಾಸಕರ ಹೆಸರನ್ನು ಹಾಕಿ ಎಂದು ಹಿತನುಡಿ ಹೇಳಿದರೆ ಅವರು ತಿದ್ದಿಕೊಳ್ಳುತ್ತಾರೆ. ಮಾನ್ಯ ಶಿವಪ್ಪನವರು ಅದನ್ನೇ ಹೇಳಿದ್ದು.

ಶ್ರೀ ಹೆಚ್.ಡಿ.ರೇವಣ್ಣ:- ಶಿವಪ್ಪನವರನ್ನೇ ಕೇಳಿ, ಯಾವುದಾದರೂ ಸರ್ಕಾರೀ ಕಾರ್ಯಕ್ರಮವನ್ನು ಮಾಡುವಾಗ ಎಂದಾದರೂ ಅವರನ್ನು ಬಿಟ್ಟಿದ್ದೇನೆಯೇ ಎಂದು ಕೇಳಿ.

ಅಧ್ಯಕ್ಷರು:- ಇಲ್ಲಿ ಆಕ್ಷೇಪಣೆ ಎತ್ತಿರುವುದು ಶಿವರಾಮ್‌ರವದು, ಶಿವಪ್ಪನವರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸರ್ಕಾರಿ ಪ್ರೌಢಶಾಲೆಗಳಲ್ಲಿ ನಡೆಯುವ ಕಾರ್ಯಕ್ರಮ ಖಾಸಗಿಯದ್ದಲ್ಲ. ಆದರೆ ಇಲ್ಲಿ ಇವರು ಏನು ಮಾಡುತ್ತಾರೆಂದರೆ ಲೋಕಲ್ ಕಮಿಟಿ ಮಾಡಿಕೊಂಡು ಅವರೇ ಕಾರ್ಯಕ್ರಮ ಮಾಡಿದ ಹಾಗೆ ಮಾಡುತ್ತಾರೆ. ಈ ವಿಚಾರ ಬಂದಾಗ ಆ ಕಾರ್ಯಕ್ರಮದಲ್ಲಿ ಗೌವರ್ನ್‌ಮೆಂಟ್ ಇನ್‌ವಾಲ್ವ್‌ಮೆಂಟ್ ಇಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು:- ಖರ್ಗೆಯವರೇ, ರೇವಣ್ಣನವರಿಗೆ ಇನ್ನೂ ಚಿಕ್ಕ ವಯಸ್ಸು. ಮೊದಲನೇ ಬಾರಿಗೆ ಆಯ್ಕೆಯಾಗಿ ಬಂದಿದ್ದಾರೆ. ತಾವು ಮಂತ್ರಿಗಳಾಗಿದ್ದವರು, ನಿಮ್ಮ ಹಿತದೃಷ್ಟಿಯಿಂದ ಕೂಡ ಸ್ವಲ್ಪ ವಿಶಾಲ ಹೃದಯದಿಂದ ನಡೆದುಕೊಳ್ಳಬೇಕು. ಪ್ರಿಂಟ್ ಮಾಡಿಸಿದರೆ ನಮಗಾಗುವ ನಷ್ಟವಾದರೂ ಏನು? ಆದುದರಿಂದ ಎಲ್ಲರೂ ಈ ಬಗ್ಗೆ ಸಹಕರಿಸಬೇಕು. ಇಲ್ಲಿ ವಿಚಿತ್ರವಾದ ಸನ್ನಿವೇಶ ಇಲ್ಲೇನಾಗಿದೆಯೆಂದರೆ ಸನ್ಮಾನ್ಯ ಶಿವಪ್ಪನವರು ಹೇಳಿದಂತೆ ಅಲ್ಲಿಯ ಸ್ಥಳೀಯ ಮುಖಂಡರು ಬೆಟರ್‌ಮೆಂಟ್ ಕಮಿಟಿಗಳವರು ಕಾರ್ಯಕ್ರಮವನ್ನು ರೂಪಿಸಿ ಅವರ ಹೆಸರನ್ನು ಪ್ರಿಂಟ್ ಮಾಡಿಸುತ್ತಾರೆ. ಇಲ್ಲಿ ಮಂತ್ರಿಗಳು ಏನು ಹೇಳಿದರೆಂದರೆ ಸರ್ಕಾರದಿಂದ ಕಾರ್ಯಕ್ರಮವನ್ನು ರೂಪಿಸಿಲ್ಲ, ಅಲ್ಲಿಯ ಸ್ಥಳೀಯ ಮುಖಂಡರುಗಳು ಮಾಡುವ ಕಾರ್ಯಕ್ರಮಕ್ಕೆ ನನ್ನ ಜವಾಬ್ದಾರಿಯಿಲ್ಲವೆಂದರು. ಅವರು ಹೇಳಿದ್ದು ಟಿಕ್ಕಿಕಲಿ ಕರೆಕ್ಟ್ ಬಟ್ ಮಾರಲಿ ನಾಟ್

ಕರೆಕ್ಟ್. ಮಾನ್ಯ ಖರ್ಗೆಯವರು ಹೇಳಿದರು ಲೋಕಲ್ ಕಮಿಟಿ ಎಂದು ಹೇಳಿ ಸರ್ಕಾರದ ಹಣ ವಿನಿಯೋಗ ಮಾಡಿ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಬೇಕಾದರೆ ಅದು ಸರ್ಕಾರಿ ಕಾರ್ಯಕ್ರಮವಾಗೇ ಆಗುತ್ತದೆ. ಎಂದು ಏನು ಅವರು ಹೇಳಿದರೋ ಅದು ಸರಿ. ಅದಕ್ಕೋಸ್ಕರವೇ ನಾನು ಹೇಳಿದ್ದು ಸ್ಥಳೀಯ ಶಾಸಕರನ್ನು ಇಟ್ಟುಕೊಂಡು ಇಂಥ ಕಾರ್ಯಕ್ರಮಗಳನ್ನು ಮಾಡುವುದು ಬಹಳ ಚೆನ್ನಾಗಿ ಕಾಣುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಸರ್ಕಾರಿ ಸಮಾರಂಭಗಳಲ್ಲಿ ಶಾಸಕರ ಹೆಸರನ್ನು ಬಿಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು:-ಹಾಸನದ ಪ್ರಕಾಶ್‌ರವರು ಏನೋ ನಿಂತಿದ್ದಾರೆ, ಅವರು ಏನೋ ಹೇಳುವುದಕ್ಕೆ ಹೊರಟ್ಟಿದ್ದಾರೆ. ಒಂದು ನಿಮಿಷ ಸುಮ್ಮನಿರಿ.

ಶ್ರೀ ಹೆಚ್. ಎಸ್. ಪ್ರಕಾಶ್ (ಹಾಸನ):- ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರಾದ ಮಾನ್ಯ ಶಿವರಾಮ್‌ರವರು ಹೇಳಿದರೂ, ಭೂ ನ್ಯಾಯ ಮಂಡಳಿಯಲ್ಲಿ ನನ್ನ ಹೆಸರನ್ನು ಕೈ ಬಿಟ್ಟುದ್ದಾರೆಂದು. ಬಹು ಭಾಗದಿಂದ ಬಂದಿರತಕ್ಕ ಕ್ಷೇತ್ರದಲ್ಲಿ ನಾನು ಅಧ್ಯಕ್ಷನಾಗಿ ಅವರು ಸದಸ್ಯರಾಗಿ ಕೆಲಸ ಮಾಡುತ್ತಿದ್ದೇವೆ. ಮೀಟಿಂಗ್‌ಗಳಲ್ಲಿ ಅಟೆಂಡ್ ಆಗುತ್ತಿದ್ದೇವೆ. ನಿನ್ನೆ ಇದೇ ಸದನದಲ್ಲಿ ಅವರು ಇದನ್ನು ಹೇಳಿದ್ದಾರೆ. ಸತ್ಯವನ್ನು ಹೇಳಲಿ. ಸರ್ಕಾರಿ ಕಾರ್ಯಕ್ರಮಗಳಲ್ಲಿ ನಿರ್ದಿಷ್ಟವಾಗಿ ಶಾಸಕರ ಹೆಸರನ್ನು ಬಿಟ್ಟಿದ್ದರೆ ಅವರು ಹೇಳಲಿ.

ಶ್ರೀ ಬಿ. ಶಿವರಾಮ್:- ನಿನ್ನೆ ನಾನು ಪ್ರಸ್ತಾಪ ಮಾಡಿದ ವಿಷಯ ಕಡತದಲ್ಲಿ ಇದೆ. ಮಾನ್ಯ ಪ್ರಕಾಶ್‌ರವರು ಅದನ್ನು ತೆಗೆಸಿ ನೋಡಬೇಕು. ನಾನು ಹೇಳಿದ್ದು ಅರಸೀಕೆರೆ ಸಮಿತಿ ಬಗ್ಗೆ ಎರಡನೆಯದಾಗಿ ಇದು ಸರ್ಕಾರಿ ಕಾರ್ಯಕ್ರಮಗಳ ಉದ್ಘಾಟನೆ, ಖಾಸಗಿಯಾದದ್ದು ಆಗಿದ್ದರೆ ನಾನು ಕೇಳುತ್ತಿರಲಿಲ್ಲ. ನಾನೇನೂ ಹೊಸಬನಲ್ಲ, ಶಾಸಕನಾಗಿ ಏಳು ವರ್ಷಗಳ ಅನುಭವ ನನಗಿದೆ. ಖಾಸಗಿಯವರು ಕನ್ನಡ ರಾಜ್ಯೋತ್ಸವ ಮಾಡಿದರು, ಅದನ್ನು ನಾನು ಕೇಳುವುದಿಲ್ಲ. ಆದರೆ ಶಾಲಾ ಕೊಠಡಿಗಳ ಉದ್ಘಾಟನೆ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಉದ್ಘಾಟನಾ ಸಮಾರಂಭಗಳಲ್ಲಿ ಶಾಸಕರ ಹೆಸರನ್ನು ಬಿಟ್ಟಿದ್ದಾರೆ,

ಅಧ್ಯಕ್ಷರು:- ಮಾನ್ಯ ವಿರೋಧಪಕ್ಷದ ನಾಯಕರು ಪ್ರಧಾನವಾಗಿ ಆ ವಿಚಾರವನ್ನು ಹೇಳಿದರು. ನನ್ನ ಪೂರ್ಣ ಸಹಮತ ಅವರ ಅಭಿಪ್ರಾಯಕ್ಕೆ ಇದೆ. ಸರ್ಕಾರದ ಹಣ ಖರ್ಚು ಮಾಡಿ, ಸರ್ಕಾರಿ ಶಾಲೆಯನ್ನು ಪ್ರಾರಂಭೋತ್ಸವ ಮಾಡಬೇಕಾದರೆ ಅದು ಖಾಸಗಿ ಕಾರ್ಯಕ್ರಮವಾಗುವುದಿಲ್ಲ. ಗ್ರಾಮಸ್ಥರು ಮಾಡುವುದಕ್ಕಾಗುವುದಿಲ್ಲ. ಶಾಸಕರಿಗೆ ಕೊಡತಕ್ಕಂಥ ಗೌರವವನ್ನು ಕೊಡಲೇಬೇಕು. ನಾನು ಮಾನ್ಯ ಮಂತ್ರಿಗಳಿಗೆ ನಿವೇದಿಸಿಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಕೂಡ ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಬಿ. ಶಿವರಾಂ:- ಮಾನ್ಯ ಅಧ್ಯಕ್ಷರೇ, ಸದನ ಇರುವುದರಿಂದ ನಾಳೆ ಕಾರ್ಯಕ್ರಮ ಇಲ್ಲ.

ಅಧ್ಯಕ್ಷರು:- ನಾಳೆ ಕಾರ್ಯಕ್ರಮಕ್ಕೆ ನೀವೇ ಅಧ್ಯಕ್ಷರಂತೆ, ನೀವಿಬ್ಬರೂ ಹೊರಟು ಬೆರೆ ಜೊತೆಗೆ. ಹೊಸದಾಗಿ ಪ್ರಿಂಟ್ ಮಾಡಿಸುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ಶಿವರಾಂ:- ತಾವು ಸದನ ಬಿಟ್ಟು ಹೋಗು ಎಂದು ಹೇಳುವುದಾದರೆ

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಾನು ಅಷ್ಟು ಬಾರಿ ನಿಂತಿದ್ದೇನೆ, ನಮ್ಮ ಮೇಲೆ ಕರುಣೆ ಬೇಡವೇ ನಿಮಗ.

ಶ್ರೀ ಬಿ. ಶಿವರಾಂ:- ನಾಳೆ ಏನು ಮಾಡಬೇಕೆಂಬುದನಲ್ಲಿ ತಾವು ದಯವಿಟ್ಟು ಹೇಳಬೇಕು.

ಅಧ್ಯಕ್ಷರು:- ಆಮೇಲೆ ಮಾತನಾಡೋಣ. ದಯವಿಟ್ಟು ನಂತರ ನನ್ನ ಜೇಂಬರ್‌ಗೆ ಕರೆಸುತ್ತೇನೆ. ಅರ್ಧ ಗಂಟೆ ಬಿಟ್ಟು ಚೇಂಬರಿಗೆ ಬನ್ನಿ ಮಾತನಾಡೋಣ.

ಶ್ರೀ ಬಿ. ಶಿವರಾಂ:- ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರವೇನೆಂದರೆ ಎಪಿಎಂಸಿ ಚುನಾವಣೆ ನಡೆಯುತ್ತಿರುವುದರಿಂದ ಸರ್ಕಾರಿ ಕಾರ್ಯಕ್ರಮಗಳನ್ನು ಉದ್ಘಾಟನೇ ಮಾಡಬಹುದಾ? ಅದರ ಪ್ರಕ್ರಿಯೇ 17 ರಿಂದ ಪ್ರಾರಂಭವಾಗಿದೆ. This is the copy the odder. ಇದರ ಬಗ್ಗೆ ಏನು ಹೇಳುತ್ತೇನೆ, ಕಾನೂನು ಸಚಿವರು ಇದ್ದಾರೆ, ಅವರು ಇದರ ಬಗ್ಗೆ ಬೆಳಕು ಚೆಲ್ಲುತ್ತಾರೆ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ:- ಈಗ ತಾವು ಏನು ಹೇಳುತ್ತಿದ್ದೀರಿ, ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿದೆ ಎಂದು, ಅಲ್ಲಿ ಇನ್ನು ಚುನಾವಣೆ ಸಮಯ ನಿಗದಿಯಾಗಿಲ್ಲಾ ಏಪ್ರಿಲ್ ಅಂತ್ಯದೊಳಗೆ ಮಾಡಬೇಕೆಂದು ಒಂದು ಚಿಂತನೆ.

ಶ್ರೀ ಬಿ. ಶಿವರಾಂ:- ಅಲ್ಲಿ 17ರಿಂದ ಅರ್ಜಿಗಳನ್ನು ಕೊಡುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ:- ಅದು ಅಲ್ಲಿರತಕ್ಕಂಥ ಓಟರ್ಸ್ ಲಿಸ್ಟ್ ತಯಾರು ಮಾಡಬೇಕಾಗಿರತಕ್ಕಂಥ ಪ್ರಕ್ರಿಯೆಯಾಗುತ್ತದೆ. ಆದರೆ ಅಲ್ಲಿ ಇನ್ನು ಯಾವ ದಿನಾಂಕ ಚುನಾವಣೆ ಮಾಡಬೇಕು ಎನ್ನುವುದು ನಿಗದಿಯಾಗಿಲ್ಲ. ಆದುದರಿಂದ ತಾವು ನಾಳೆ ನಾಡಿದ್ದು ಮಾಡಿದರೆ, ಇದು ಚುನಾವಣೆ ನೀತಿ ಸಂಹಿತೆ ಉಲ್ಲಂಘನೆಯಾಗುವುದಿಲ್ಲ. ಬಹುಶ: ಎಲ್ಲಾವರೂ ಉಲ್ಲಂಘನೆ ಆಗುವಂತಹ ಪರಿಸ್ಥಿತಿ ನಿರ್ಮಾಣವಾದರೆ ತಮಗೆ ಹೇಳುತ್ತಿದ್ದೇನೆ, ನಿಮಗೂ ಅಧಿಕಾರ ಇದೆ. ಚುನಾವಣೆ ಕಮಿಷನರ್‌ಗೆ ಅರ್ಜಿಯನ್ನು ಬರದು ಈ ರೀತಿ ಇದೆ ಎಂದು ಅವರ ಗಮನಕ್ಕೆ ತೆಗೆದುಕೊಂಡು ಬನ್ನಿ. ಆದರೆ ಇವತ್ತು ಸರ್ಕಾರದ ವತಿಯಿಂದ ಹೇಳುತ್ತಿದ್ದೇನೆ, ಚುನಾವಣೆ ದಿನಾಂಕ ಇನ್ನು ನಿಗದಿಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಶಾಸಕರ ಅಧ್ಯಕ್ಷತೆ ಬಗ್ಗೆ ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು:- ಈ ವಿಷಯವನ್ನು ಇಲ್ಲಿಗೆ ಕ್ಲೋಸ್ ಮಾಡೋಣವೆಂದು ಇದ್ದೇನೆ.

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಇದು ಸರ್ಕಾರದ ಪ್ರಾಮಾಣಿಕವಾದ ನೀತಿಯಾಗಬೇಕು. ಒಂದೊಂದು ಜಿಲ್ಲೆಗೆ, ಒಂದೊಂದು ತಾಲ್ಲೂಕಿಗೆ, ಒಂದೊಂದು ತರಹ ರಾಜಕಾರಣ ಮಾಡುವುದಕ್ಕಾಗುವುದಿಲ್ಲ. ಇದು ಪ್ರಾಮಾಣಿಕವಾದುದು. ತಮ್ಮ ಒಂದು ಗಮನಕ್ಕೆ ಒಂದು ಮಾಹಿತಿಯನ್ನು ಕೊಡುತ್ತಿದ್ದೇನೆ, ಹಿಂದೆ ಮಾನ್ಯ ವಿರೇಂದ್ರಪಾಟೀಲರು ಇದ್ದಂತಹ ಕಾಲದಲ್ಲಿ ಚಾಮರಾಜ ನಗರಕೆ ಕಾವೇರಿಯ ಕುಡಿಯುವ ನೀರು ಬಂದಾಗ ಬೇಕು ಎಂದು ಕೆಲವರು ಮುಖ್ಯ ಅತಿಥಿ ಎಂದು ಹಾಕಿದ್ದರು. ಇದು ಮಾನ್ಯ ವಿರೇಂದ್ರಪಾಟೀಲರ ಗಮನಕ್ಕೆ ಬಂದಾಗ ಆ ಆಹ್ವಾನ ಪತ್ರಿಕೆಗಳನ್ನುರದ್ದುಪಡಿಸಿ ಸಂಬಂಧಪಟ್ಟ ಶಾಸಕರು ಅಧ್ಯಕ್ಷತೆ ವಹಿಸಬೇಕು ಎಂದು ತೀರ್ಮಾನವಾಯಿತು. ಇದಾದನಂತರ ಬಂದಂತಹ ಎಲ್ಲಾ ಸರ್ಕಾರಗಳು, ಮೊಯಿಲಿಯವರ ಸರ್ಕಾರ, ಬಂಗಾರಪ್ಪನವರ ಸರ್ಕಾರ, ದೇವೇಗೌಡರ ಸರ್ಕಾರ ಎಲ್ಲಾ ಸರ್ಕಾರಗಳು ಶಾಸಕರೇ ಅಲ್ಲಿ ಅಧ್ಯಕ್ಷತೆ ವಹಿಸಬೇಕು ಎಂದು ಮಾಡಿದರು. ಇಲ್ಲಿ ಬಹಳ ಪ್ರಮುಖವಾದಂತಹ ವಿಚಾರವೇನೆಂದರೆ ಸಾರ್ವಜನಿಕರು ಯಾರು ಕೂಡ ಸರ್ಕಾರಿ ಸಮಾರಂಭವನ್ನು ಮಾಡುವುದಕ್ಕಾಗುವುದಿಲ್ಲ. ಆದರಲ್ಲಿ ಶಾಸಕರೆ ಅಧ್ಯಕ್ಷತೆ ವಹಿಸಬೇಕು. ಅದು ಸ್ಪಷ್ಟ, ಅದರ ಬಗ್ಗೆ ಇದರಲ್ಲಿ ರಾಜಿ ಇಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದೇ ದಿನ ಬೆಳಿಗ್ಗೆ ತಾಪತ್ರಯವಾಗುತ್ತದೆ. ಮಾನ್ಯ ಶಿವಪ್ಪನವರು ಏನು ಹೇಳಿದರು, ಜಿಲ್ಲಾ ಮಂತ್ರಿಗಳು, ಇದು ಬಹಳ ವ್ಯಾಖ್ಯಾನ.

ಅಧ್ಯಕ್ಷರು:- ಬೇಡ ಸಮಯ ಹೋಗುತ್ತದೆ.

ಶ್ರೀವಾಟಾಳ್ ನಾಗರಾಜ್:- ಆಯಿತು, ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಮಾತನಾಡುತ್ತೇನೆ. ಮತ್ತೊಂದು ಬಹಳ ಪ್ರಮುಖವಾದಂತಹ ವಿಚಾರ ಏನೆಂದರೆ ಇಲ್ಲಿ ಒಂದು ದೊಡ್ಡ ನೊಣ ಇಡೀ ಸದನವನ್ನು ಅವರಿಸಿಕೊಂಡಿದೆ, ಕೊತಿದೆ. ನನಗೆ ಅರ್ಥವಾಗುತ್ತಿಲ್ಲ. ನನ್ನ ಹತ್ತಿರ ಬಂತು, ನನ್ನಿಂದ ಕಂದಾಯ ಸಚಿವರಿಗೆ ಹೋಗಿದೆ. ಕಾರಣ ಏನು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೆಲ್ಲ ಇರುವ ಕಡೆ ನೊಣ ಮುತ್ತಿಕೊಳ್ಳುತ್ತದೆ. ಆ ನೊಣ ಆ ಕಡೆನೇ ಹೋಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಪ್ರಾಮುಖ್ಯ. ಏಕೆಂದರೆ ಇವರಿಗೂ ಬಂದಿದೆ. ಅದು ಕಡಿಗೆ ಹೆಚ್ಚುಕಡಿಮೆಯಾಗುತ್ತದೆ. ಮೊದಲು ನನ್ನ ಹತ್ತಿರ ಬಂತು. ನಾನು ಓಡಿಸಿದೆ, ಆ ಕಡೆಗೆ ಹೋಗು ಎಂದು. ಅದು ರೆವಿನ್ಯೂ ಮಂತ್ರಿಗಳನ್ನು ಹಿಡಿದುಕೊಂಡು ಬಿಟ್ಟಿದೆ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೇ, ನಾನು ಇವರ ಪಕ್ಕದಲ್ಲೇ ಕುಳಿತಿದ್ದೇನೆ, ನನಗೆ ಕಾಣಲಿಲ್ಲ, ಇವರಿಗೆ ಹೇಗೆ ಕಂಡಿತು.

ಅಧ್ಯಕ್ಷರು:- ಅದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು, ಬೆಲ್ಲ ಎಲ್ಲಿರುತ್ತದೋ ಅಲ್ಲಿ ಬರುತ್ತಿದೆ ನೊಣ ಎಂದು. ಅದು ನಿಮ್ಮ ಹತ್ತಿರ ಬರಬೇಕಾಗಿದ್ದರೆ ಕಾರಣ ನಮಗೆ

ಗೊತ್ತಿಲ್ಲ. ಕಂದಾಯ ಮಂತ್ರಿಗಳು ಮತ್ತು ನೀವು ಎಷ್ಟು ಸಿಹಿಯಾಗಿದ್ದೀರಿ ಎಂದು ನಮಗೆ ಒಂದು ಅಂದಾಜು ಸಿಕ್ಕಿತು. ರಾಜೇಂದ್ರನ್‌ವರೇ, ಈಗ ತಾವು ಮಾತನಾಡಿ. ತಾವು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

(ಎ) ಕೆ.ಜಿ.ಎಫ್.ನಲ್ಲಿ ಡಿ.ಸಿ. ಯವರು 24 ರಂದು ಸ್ಯಾನಿಟರಿ ಬೋರ್ಡನ್ನು ಮರ್ಜ್ ಮಾಡಬೇಕೆಂದು ಸಿಟಿ ಮುನಿಸಿಪಾಲಿಟಿಯಲ್ಲಿ ಒಂದು ನಿರ್ಣಯವನ್ನು ಮಾಡಿರುವುದು.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್):- ಮಾನ್ಯ ಅಧ್ಯಕ್ಷರೇ, ನಾನು ಹೊಸದಾಗಿ ಬಂದಿರುವ ಸದಸ್ಯ. ಆದುದರಿಂದ ನಾನು ಮಾತನಾಡುವಾಗ ಚಿಂತನೆ ಮಾಡಿ ಮಾತನಾಡಬೇಕು.

In K.G.F. there are two civic bodies. one is Sanitary Board and the other one is City Municipality.

ಈಗ ಡಿಸಿಯವರು 24ರಂದು ಸ್ಯಾನಿಟರಿ ಬೋರ್ಡ್‌ನ್ನು ಮರ್ಜ್ ಮಾಡಬೇಕೆಂದು ಸಿಟಿ ಮುನಿಸಿಪಾಲಿಟಿಯಲ್ಲಿ ಒಂದು ರೆಸಲ್ಯೂಷನ್ ಪಾಸ್ ಮಾಡಿದ್ದಾರೆ. Already there is a case against B.G.M.L. and they have issued a notice to the Government also in Case No.44583/1995 dated 22-12-1995. The writ petition is accepted and very clearly they have mentioned that until further orders, this should notmove. They have sent a copy also to the H.U.D., and they have given a copy to me. when I brought this matter to the notice of the Deputy Commissioner, he said, "no, no, I am sorry, this is the Government order, I have to and over." The people of KGF are already facing major problems. These two are the civic bodies and the Sanitary Board is functioning atleast little better in the Mining area. If they mergs it to Municipality, which is already beinooted and which is full of corruption, people will face lot of problems. I therefore request the Hon'ble Minister to instruct the Deputy Commissioner not to marge the two civic bodies on 24th. This is a transparent society and everything is crystal clear. They should inform me as to for what cause they are merging.

MR. SPEAKER:- Let us see, what the Law Mininster Says.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಕೆಲವು ಕೋರ್ಟಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರವನ್ನು ಎತ್ತಿದ್ದಾರೆ, ಈಗ ನನ್ನ ಹತ್ತಿರ ಮಾಹಿತಿ ಇಲ್ಲ, ಇದರ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಿ ಮಾಹಿತಿ ತರಿಸಿ ಅದಕ್ಕೆ ನಾಳೆ ಉತ್ತರವನ್ನು ಕೊಡುತ್ತೇನೆ.